360 (332) ಶ್ರೀ ಹೊನ್ನಾಳಿ ಜಬ್ಬಾರ್ ಖಾನ್ ಹಯಾತ್ ಖಾನ್ ಹಾಲಪ್ಪ ಹೆಚ್ (ಹೊಸನಗರ ಕ್ಷೇತ್ರ) ಮಾನ್ಯ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಧಾರವಾಡ, ಗದಗ, ಹಾವೇರಿ ಜಿಲ್ಲೆಗಳಲ್ಲಿ ನೋಂದಾಯಿಸಿದ ಸ್ತ್ರೀಶಕ್ತಿ ಮತ್ತು ಮಹಿಳಾ ಸ್ವಸಹಾಯ ಗುಂಪುಗಳೆಷ್ಟು (ಜಿಲ್ಲಾವಾರು ವಿವರ ನೀಡುವುದು),

ಆ) ಆರ್ಥಿಕವಾಗಿ ಸ್ವಾವಲಂಬನೆಗೊಳಿಸಲು ಈ ಗುಂಪುಗಳಿಗೆ ಸರ್ಕಾರ ದಿನಾಂಕ 1 1 2006ರಿಂದ ದಿನಾಂಕ 31 12 2006ರ ವರೆಗೆ ಬಿಡುಗಡೆ ಮಾಡಿದೆ ಆರ್ಥಿಕ ಅನುದಾನವೆಷ್ಟು, (ಜಿಲ್ಲಾವಾರು ವಿವರ ನೀಡುವುದು),

ಇ) ಸ್ತ್ರೀಶಕ್ತಿ ಗುಂಪುಗಳಿಗೆ ಸರ್ಕಾರ ನೀಡುತ್ತಿರುವ ಪ್ರೋತ್ಸಾಹ ಮಹಿಳಾ ಸ್ವಸಹಾಯ ಗುಂಪುಗಳಿಗೆ ದೊರೆಯುತ್ತಿಲ್ಲವೆಂಬುದು ಸರ್ಕಾರದ ಗಮನಕ್ಕೆ ಬಂದಿದಯೇ,

ಈ) ಹಾಗಿದ್ದಲ್ಲಿ ಇದನ್ನು ಸರಿಪಡಿಸಲಿಕ್ಕೆ ಸರ್ಕಾರ ಯಾವ ಕ್ರಮ ಕೈಗೊಂಡಿದೆ?

ಶ್ರೀ ಹೆಚ್ ಕೆ ಕುಮಾರಸ್ವಾಮಿ (ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು)

ಅ) ಧಾರವಾಡ ಜಿಲ್ಲೆಯಲ್ಲಿ 2497, ಗದಗ ಜಿಲ್ಲೆಯಲ್ಲಿ 2671, ಹಾವೇರಿ ಜಿಲ್ಲೆಯಲ್ಲಿ 4,029 ಸ್ತ್ರೀಶಕ್ತಿ ಸ್ವಸಹಾಯ ಗುಂಪುಗಳಿವೆ ಸ್ತ್ರೀಶಕ್ತಿ ಗುಂಪುಗಳನ್ನು ನೋಂದಾಯಿಸುವ ಅವಶ್ಯಕತೆ ಇರುವುದಿಲ್ಲ

ಆ) ದಿನಾಂಕ 1 1 2006ರಿಂದ ದಿನಾಂಕ 31 12 2006 ರವರೆಗೆ ಈ ಗುಂಪುಗಳಿಗೆ ಹಾವೇರಿ ಜಿಲ್ಲೆಯಲ್ಲಿ ರೂ 22 04 ಲಕ್ಷ ಧಾರವಾಡ ಜಿಲ್ಲೆಯಲ್ಲಿ 13 98 ಲಕ್ಷ ಹಾಗೂ ಗದಗ್ ಜಿಲ್ಲೆಯಲ್ಲಿ ರೂ 21 20 ಲಕ್ಷಗಳನ್ನು ಬಿಡುಗಡೆ ಮಡಲಾಗಿದೆ (ಜಿಲ್ಲಾವರು ವಿವರವನ್ನು ಅನುಬಂಧದಲ್ಲಿ ಲಗತ್ತಿಸಿದೆ)

ಇ) ಸ್ತ್ರೀಶಕ್ತಿ ಗುಂಮಗಳನ್ನು ಬಡವರಲ್ಲಿ ಕಡು ಬಡವರ ನಬಲೀಕರಣಕ್ಕಾಗಿ ರಚಿನಲಾಗಿದೆ ಸ್ವಸಹಾಯ ಗುಂಮಗಳನ್ನು ವಿವಿಧ ಕಾರಣಗಳಿಗಾಗಿ ರಚಿಸಲಾಗಿದೆ ಮತ್ತು ಸರ್ಕಾರವು ಸ್ತ್ರೀಶಕ್ತಿ ಯೋಜನೆಯ ಮಾರ್ಗಸೂಚಿಯಂತೆ ಸ್ತ್ರೀಶಕ್ತಿ ಯೋಜನೆಯಡಿಯಲ್ಲಿ ರಚಿಸಲಾದಂತಹ ಸ್ವಸಹಾಯ ಗುಂಮಗಳಿಗೆ ಮಾತ್ರ ಬೆಂಬಲ ನೀಡುತ್ತದೆ

ಈ) ಸ್ತ್ರೀಶಕ್ರಿ ಯೋಜನೆಯಡಿ ರಚಿತವಾಗಿರುವ ಸ್ವಸಹಾಯ ಗುಂಮ ಯೋಜನೆಯ ಪ್ರಯೋಜನ ಪಡಯಲು ಕಷ್ಟ ಎದುರಿಸುತ್ತಿರುವ ಪ್ರಕರಣ ಯವುದಾದರೂ ಇದ್ದಲ್ಲಿ ಅದನ್ನು ಸರ್ಕಾರದ ಗಮನಕ್ಕೆ ತಂದಲ್ಲಿ ಪರಿಹಾರ ಕ್ರಮಕ್ಕೈಗೊಳ್ಳಲಾಗುವುದು

ಅನುಬಂಧ ಹಾವೇರಿ ಗದಗ್ ಹಾಗೂ ಧಾರವಾಡ ಜಿಲ್ಲೆಗಳಲ್ಲಿ ದಿನಾಂಕ 1 1 20069 ರಿಂದ ದಿನಾಂಕ 31 12 20069 ರಿಂದ ದಿನಾಂಕ 31 12 2006 ರವರೆಗೆ ಸ್ತ್ರೀಶಕ್ತಿ ಯೋಜನೆಯಡಿ ಬಿಡುಗಡೆಯಾದ ಹಣದ ಜಿಲ್ಲಾವಾರು ವಿವರ

ಕ್ರ ಸಂ	ಜಿಲ್ಲೆಯ ಹೆಸರು	ವಸ್ತು ಪ್ರದರ್ಶನ ಮತ್ತು ಮಾರಾಟ	ಗಣಕ ಯಂತ್ರ ಖರೀದಿ	ಬ್ಲಾಕ್ ಸೊಸೈಟಿ ಫೆಡರೇಷನ್ ಬಂಡವಾಳ	ತರಬೇತಿ	ಅಂಗನವಾಡಿ ಕಾರ್ಯಕರ್ತೆಯರಿಗೆ ಪ್ರೋತ್ಸಾಹ ಧನ	ಗುಂಪುಗಳಿಗೆ ಪ್ರೋತ್ಸಾಹಧನ	ಗುಂಪುಗಳಿಗೆ ಪ್ರಶಸ್ತಿ	ಒಟ್ಟು
1	ಹಾವೇರಿ	0 75	0 50	2 10	4 18	10 07	4 35	0 09	22 04
2	ಧಾರವಾಡ	0 75	1 50	1 50	3 92	6 24	0	0 07	13 98
3	ಗದಗ್	0 75	2 00	1 50	7 85	6 68	2 35	0 07	21 20
	ಒಟ್ಟು	2 25	4 00	5 10	15 95	22 99	6 70	0 23	57 22

361 (333) ಶ್ರೀ ಹೊನ್ನಾಳಿ ಜಬ್ಬಾರ್ ಖಾನ್ ಹಯಾತ್ ಖಾನ್ (ಹುಬ್ಬಳ್ಳಿ) ಮಾನ್ಯ ಲೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಯಾವ ಯಾವ ವಿದ್ಯುತ್ ಕಂಪನಿಗಳು ಇವೆ ಯಾ ಯಾವ ದಿನಾಂಕದಿಂದ ಕೆಲಸ ನಿರ್ವಹಿಸುತ್ತಿವೆ (ಮಾಹಿತಿ ನೀಡುವುದು),

ಆ) ಈ ಪೈಕಿ ಲಾಭದಲ್ಲಿ ಮತ್ತು ನಷ್ಟದಲ್ಲಿ ನಡೆಯುತ್ತಿರುವ ಕಂಪನಿಗಳು ಯಾವುವು,

ಇ) ರಾಜ್ಯದಲ್ಲಿ ಎಲ್ಲ ವಿದ್ಯುತ್ ಉತ್ಪಾದನಾ ಸಂಸ್ಥೆಗಳಿಂದ ಎಷ್ಟು ಸಾವಿರ ಮೆಗಾವ್ಯಾಟ್ ವಿದ್ಯುತ್ ಉತ್ಪಾದನೆಯಾಗುತ್ತಿದೆ, (ಉತ್ಪಾದನಾ ಘಟಕವಾರು ವಿವರ ನೀಡುವುದು),

ಈ) ಒಟ್ಟು ಎಷ್ಟು ಸಾವಿರ ಮೆಗಾವ್ಯಾಟ್ ಬೇಡಿಕೆ ಇದೆ,